# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,

## ಸಹಾಯಕ ಕಾರ್ಯಪಾಲಕ ಅಭಿಯಂತರರು, ಯಲಹಂಕ ಉಪ ವಿಭಾಗ

## ಕೆಂಪೇಗೌಡ ವಾರ್ಡ್ ನಂ-01ರಲ್ಲಿ

## ದಿನಾಂಕ: 17-09-2022 ರಂದು ನಡೆದ ವಾರ್ಡ್ ಸಮಿತಿ ಸಭಾ ನಡವಳಿ.

ದಿನಾಂಕ: 17-09-2022 ರಂದು ಬೆಳಗ್ಗೆ 11.00 ಗಂಟೆಗೆ ಬಿ.ಬಿ.ಎಂ.ಪಿ ಯಲಹಂಕ ವಿಭಾಗದ ಕಛೇರಿಯಲ್ಲಿ ವಾರ್ಡ್ ನಂ-01ರ ವಾರ್ಡ್ ಸಮಿತಿಯ ಮಾನ್ಯ ನೋಡೆಲ್ ಅಧಿಕಾರಿಗಳು ಹಾಗೂ ಕಾರ್ಯದರ್ಶಿಗಳು ಜೊತೆ ನೆಡೆದ ವಾರ್ಡ್ ಕಮಟಿ ಸಭೆಯ ನಡವಳಿಗಳು.

| ಕ್ರ.ಸಂ | ಸಭೆಯಲ್ಲಿ ಭಾಗವಹಿಸಿದ ಅಧಿಕಾರಿ ಹೆಸರು | ಪದನಾಮ |
|---|---|---|
| 01 | ಶ್ರೀ.ರಾಮಸಂಜೀವಯ್ಯ | ಸಹಾಯಕ ಕಾರ್ಯಪಾಲಕ ಅಭಿಯಂತರರು ಯಲಹಂಕ ಉಪ ವಿಭಾಗ ಹಾಗೂ ಬಿ.ಬಿ.ಎಂ.ಪಿ ನೋಡಲ್ ಅಧಿಕಾರಿಗಳು (ವಾರ್ಡ್ ನಂ-01) |
| 02 | ಶ್ರೀ.ದೇವರಾಜಯ್ಯ.ಕೆ.ಬಿ. | ಸಹಾಯಕ ಅಭಿಯಂತರರು (ವಾರ್ಡ್ ನಂ-01) (ಸಾಂದರ್ಭಿಕ ರಜೆ) |
| 03 | ಶ್ರೀ.ಕೆ.ಎನ್. ಬಾಬುರೆಡ್ಡಿ | ಸಹಾಯಕ ಅಭಿಯಂತರರು (ವಿದ್ಯುತ್) ಗೈರು ಹಾಜರಾಗಿರುತ್ತಾರೆ. |
| 04 | ಶ್ರೀ.ಅಶೋಕ್ .ಎಂ.ಆರ್ | ಸಹಾಯಕ ಕಂದಾಯ ಅಧಿಕಾರಿಗಳು ಯಲಹಂಕ ಉಪ ವಿಭಾಗ ಗೈರು ಹಾಜರಾಗಿರುತ್ತಾರೆ. |
| 05 | ಶ್ರೀ.ಶಿವಕುಮಾರ್.ಎ.ವಿ | ರೆವಿನ್ಯೂ ಇನ್ಸ್‌ಪೇಕ್ಟರ್ |
| 06 | ಶ್ರೀಮತಿ. ಸುನಂದಮ್ಮ | ಹಿರಿಯ ಆರೋಗ್ಯ ಪರಿವೀಕ್ಷಕರು |
| 07 | ಶ್ರೀ. ವಿನಯ ಕುಮಾರ್ | ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) ಗೈರು ಹಾಜರಾಗಿರುತ್ತಾರೆ. |
| 08 | ಶ್ರೀ. ಎನ್. ಶ್ರೀರಾಮ ರೆಡ್ಡಿ | ರೆವಿನ್ಯೂ ಇನ್ಸ್‌ಪೇಕ್ಟರ್ |
| 09 | ಶ್ರೀ.ವಿವೇಕ್ | ಕಿರಿಯ ಆರೋಗ್ಯಪರಿವೀಕ್ಷಕರು ವಾಡ್-1 |
| 10 | ಶ್ರೀ.ಕುಮಾರ್ ಸ್ವಾಮಿ | ಜಾನುವಾರ ಅಧಿಕಾರಿಗಳು |
| 11 | ಶ್ರೀ.ಶಿವಶಂಕರ್ | ದ್ವಿತಿಯ ದರ್ಜೆ ಸಹಾಯಕರು |
| | ಬಡಾವಣೆ ಕ್ಷೇಮಾಭಿವೃದಿ ಸಂಘದ ಅಧ್ಯಕ್ಷರು/ಕಾರ್ಯದರ್ಶಿ/ಸದಸ್ಯರು/ಸಾರ್ವಜನಿಕರು | |
| 01 | ಶ್ರೀ.ಹೇಮರಾಜ್ | ಸ್ಥಳೀಯ ಮುಖಂಡರು |
| 02 | ಶ್ರೀ. ಅ.ಬ.ಶಿವಕುಮಾರ್ | ಸ್ಥಳೀಯ ಮುಖಂಡರು |
| 03 | ಶ್ರೀ.ರಾಮರೆಡ್ಡಿ | ಸ್ಥಳೀಯ ನಿವಾಸಿಗಳು |

| | | |
|---|---|---|
| 04 | ಶ್ರೀ.ಎ.ಎಸ್.ರಾಜು | ಸ್ಥಳೀಯ ನಿವಾಸಿಗಳು |
| 05 | ಶ್ರೀ.ಶ್ರೀನಿವಾಸಲು | ಸ್ಥಳೀಯ ನಿವಾಸಿಗಳು |
| 06 | ಶ್ರೀ.ವೆಂಕಟೇಶ್ | ಮಾರುತಿನಗರ |
| 07 | ಶ್ರೀ.ದಶರಥ | ಯಲಹಂಕ |
| 08 | ಶ್ರೀ.ಎ.ಎನ್.ಮದುಸೂದನ್ (ಮಂಜುನಾಥ) | ಎಲೆಕ್ಟ್ರೀಕಲ್ಸ್ ಗುತ್ತಿಗೆದಾರರು |
| 09 | ಶ್ರೀ.ಆಕಾಶ್ | ಮಾರ್ಷಲ್ |

ಸಭೆಗೆ ಹಾಜರಿದ್ದ ನೊಡೆಲ್ ಅಧಿಕಾರಿಗಳು ಹಾಗೂ ಬಾಗವಹಿಸಿದ್ದ ಎಲ್ಲಾ ಅಧಿಕಾರಿಗಳನ್ನು ಮತ್ತು ಸಾರ್ವಜನಿಕರ ಸಭೆಗೆ ಸ್ವಾಗತಿಸುತ್ತಾ ಸಭೆ ಪ್ರಾರಂಭಿಸಲು ನೊಡೆಲ್ ಅಧಿಕಾರಿರವರನ್ನು ಕೋರಲಾಯಿತು.

ಶ್ರೀ.ರಾಮಸಂಜೀವಯ್ಯ ಸಹಾಯಕ ಕಾರ್ಯಪಾಲಕ ಅಭಿಯಂತರರು ಯಲಹಂಕ ಉಪ ವಿಭಾಗ ಹಾಗೂ ಸಮಿತಿಯ ನೊಡೆಲ್ ಅಧಿಕಾರಿಯವರು ಸಭೆಯನ್ನು ಪ್ರಾರಂಭಿಸಿ ಈ ಹಿಂದಿನ ಸಭೆಯಲ್ಲಿ ಅಂದರೆ ದಿನಾಂಕ: 03-09-2022 ರಂದು ನಡೆದ ಸಭೆಯಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ವಿವರಣೆ ಕೇಳಿದರು. ಹಾಗೂ ವಾರ್ಡ್ ನಂ-01ರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಅಧಿಕಾರಿಗಳಿಗೆ ಕೈಗೊಂಡ ಕ್ರಮದ ಬಗ್ಗೆ ವರದಿ ನೀಡುವಂತೆ ಸಭೆಯಲ್ಲಿ ಸೂಚಿಸಿದರು. ಹಾಗೂ ಈ ಹಿಂದೆ ಕೈಗೊಂಡಿರುವ ಸಭೆಯ ನಡವಳಿಗಳನ್ನು ಸಭೆಯಲ್ಲಿ ವರದಿಯನ್ನು ಓದಲಾಯಿತು.

| ಕ್ರ.ಸಂ | ವಿಷಯ ಸೂಚಿ | ನಿರ್ಣಯ | ಕ್ರಮ ತೆಗೆದುಕೊಳ್ಳಬೇಕಾದ ಅಧಿಕಾರಿ |
|---|---|---|---|
| 01 | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕೆಂಪೇಗೌಡ ವಾರ್ಡ್ ನಂ -01ರ ವ್ಯಾಪ್ತಿಯಲ್ಲಿ ಬರುವ ಕೋಗಿಲು ವೃತ್ತಕ್ಕೆ "**ಡಿ.ಡಾ|| ಪುನೀತ್ ರಾಜ್‌ಕುಮಾರ್ ವೃತ್ತ**" ಎಂದು ನಾಮಕರಣ ಮಾಡುವ ಬಗ್ಗೆ ಸಂಬಂಧಪಟ್ಟ ವಾರ್ಡ್ ಸಮಿತಿಯ ಮುಂದೆ ಮಂಡಿಸಿ ಅಭಿಪ್ರಾಯವನ್ನು ಪಡೆದು ಮಹಜರ್ ವರದಿ ಹಾಗೂ ಕಚ್ಚಾನಕ್ಷೆಯ ಅಂತ್ಯದಲ್ಲಿ ಸಂಬಂಧಪಟ್ಟ ಸಹಾಯಕ ಕಂಧಾಯ ಅಧಿಕಾರಿಗಳು ಹಾಗೂ ಕಂದಾಯ ಪರಿವೀಕ್ಷಕರು ದೃಡೀಕರಿಸಲು ಮಾನ್ಯ ಜಂಟಿ ಆಯುಕ್ತರು (ಕಂದಾಯ) ಬಿ.ಬಿ.ಎಂ.ಪಿ ರವರು ಸೂಚಿಸಿರುವ ಮೇರೆಗೆ ದಿನಾಂಕ: 17-09-2022 ರಂದು ವಾರ್ಡ್ ಕಮಿಟಿ ಸಮಿತಿಯ ಸಭೆಯಲ್ಲಿ ಈ ವಿಷಯದ ಬಗ್ಗೆ ಚರ್ಚಿಸಿ ಸಭೆಯಲ್ಲಿ ಹಾಜರಿದ್ದ ಎಲ್ಲರ ಅಭಿಪ್ರಾಯ ಪಡೆಯಲಾಯಿತು. ಹಾಗೆ ಯಲಹಂಕ ವಾರ್ಡ್ ನಂ 01 ಕೋಗಿಲು ವೃತ್ತದಲ್ಲಿ "**ಡಿ.ಡಾ|| ಪುನೀತ್ ರಾಜ್‌ಕುಮಾರ್ ವೃತ್ತ**" ಎಂದು ನಾಮಕರಣ ಮಾಡುವುದಕ್ಕೆ ವಾರ್ಡ್ ಸಮಿತಿ ಸಭೆಯಲ್ಲಿ ಭಾಗವಹಿಸಿದ್ದ ಸಾರ್ವಜನಿಕರು ಹಾಗೂ ಸಂಘಸಂಸ್ಥೆಗಳು ಪಧಾದಿಕಾರಿಗಳು ಒಮ್ಮತದಿಂದ ಒಪ್ಪಿಗೆ ಸೂಚಿಸಿದರು, | | |
| 02 | ಕೆಂಪೇಗೌಡ ವಾರ್ಡ್ ನಂ-01ರ ವ್ಯಾಪ್ತಿಯಲ್ಲಿರುವ ಆರ್.ಆರ್.ಗೋಲ್ಡ್ ಪ್ಯಾಲೆಸ್ ಮುಂಬಾಗ ಮತ್ತು ಪೊಸ್ಟ್ ಆಫೀಸ್ ಮುಂಭಾಗ ಬಿ.ಎಂ.ಟಿ.ಸಿ ಬಸ್‌ಗಳು ಸುಮಾರು ಅರ್ದ ಗಂಟೆಗಳ ಕಾಲ ನಿಲ್ಲಿಸುತ್ತಿರುವುದರಿಂದ ಸಾರ್ವಜನಿಕರ ಒಡಾಟಕ್ಕೆ ಮತ್ತು ವಾಹನ ಸಂಚಾರಕ್ಕೆ ತುಂಬಾ ತೊಂದರೆ ಉಂಟಾಗುತ್ತಿರುವ ಬಗ್ಗೆ ಈ ಹಿಂದೆ ಹಲವಾರು ಭಾರಿ ದೂರುಗಳನ್ನು | ಇದಕ್ಕೆ ಸಂಬಂದಿಸಿದಂತೆ ಸಭೆಯಲ್ಲಿ ಹಾಜರಾಗಿದ್ದ ಸಂಚಾರಿ ಪೋಲಿಸ್ ಅಧಿಕಾರಿಗಳು ಬಿ.ಎಂ.ಟಿ.ಸಿ ಬಸ್ ಗಳು ನಿಲ್ಲಿಸುತ್ತಿರುವ ಬಗ್ಗೆ ಸರಿಪಡಿಸುವಂತೆ ಈಗಾಗಲೇ ಹಲವಾರು ಬಾರಿ ಶಾಂತಿನಗರದಲ್ಲಿರುವ ಡಿಪೋ ಮ್ಯಾನೆಜರ್‌ಗಳಿಗೆ ಕೋರಲಾಗಿದ್ದು. ಮತ್ತೊಮ್ಮೆ ವಾರ್ಡ್ ಕಮಿಟಿ | ಬಿ.ಎಂ.ಟಿ.ಸಿ ಡಿಪೋ ಮ್ಯಾನೇಜರ್ ಶಾಂತಿನಗರ |

| | | | |
|---|---|---|---|
| | ಸಲ್ಲಿಸಿದ್ದರೂ ಸಹ ಕ್ರಮ ಕೈಗೊಂಡಿರುವುದಿಲ್ಲ ಮತ್ತು ಬಿ.ಎಂ.ಟಿ.ಸಿ ಅಧಿಕಾರಿಗಳು ಸಭೆಗೆ ಹಾಜರಾಗಿರುವುದಿಲ್ಲ ವೆಂದು ಸಲ್ಲಿಸಿದ್ದ ದೂರಿನ ಬಗ್ಗೆ ಮತ್ತೊಮ್ಮೆ ಸಭೆಯಲ್ಲಿ ದೂರನ್ನು ಸಲ್ಲಿಸಿದರು. | ಮಿಟಿಂಗ್‌ವತಿಯಿಂದ ಬಿ.ಎಂ.ಟಿ.ಸಿ ಮುಖ್ಯಸ್ಥರಿಗೆ ಪತ್ರ ಬರೆಯುವುವಂತೆ ಸಭೆಗೆ ತಿಳಿಸಿದರು. | |
| 03 | ಕೆಂಪೇಗೌಡ ವಾರ್ಡ್ ನಂ-01ರ ಆಂಜೀನೆಯ ಸ್ವಾಮಿ ದೇವಸ್ಥಾನದ ಮುಂಭಾಗದ ಬಿ.ಡಬ್ಲ್ಯೂ.ಎಸ್.ಎಸ್.ಬಿ ಲಿಕೇಜ್‌ಅನ್ನು ಸರಿಪಡಿಸಿರುವುದಿಲ್ಲ. ಎಂಬುದಾಗಿ ಮಾಡಿ ಕ್ರಮ ಕೈಗೊಳ್ಳುವಂತೆ ಸ್ಥಳೀಯ ಅ.ಬ.ಶಿವಕುಮಾರ್ ರವರು ಕೋರಿದರು. | ಇದಕ್ಕೆ ಸಂಬಂದಿಸಿದಂತೆ ಸಭೆಯಲ್ಲಿ ಹಾಜರಿದ್ದ ಶ್ರೀ.ರಾಮಲಿಂಗ ಜಲಪರಿವೀಕ್ಷಕರು ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಮಾತನಾಡಿ ಸ್ಥಳ ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳಲಾಗುವುದೆಂದು ಸಭೆಯಲ್ಲಿ ತಿಳಿಸಿದರು. | ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ |
| 04 | ಕೆಂಪೇಗೌಡ ವಾರ್ಡ್ ನಂ-01ರಲ್ಲಿರುವ ಪ್ರಕಾಶ್ ಥೇಯೆಟರ್ ಎದುರುಗಡೆ ಗಿಡಗಂಟೆಗಳು ಬೆಳೆದಿದ್ದು, ಹಾವುಗಳು ಹೆಚ್ಚಾಗಿರುವುದರಿಂದ ಕೂಡಲೇ ಸ್ಥಳ ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳುವಂತೆ ಸ್ಥಳೀಯ ಅ.ಬ.ಶಿವಕುಮಾರ್ ರವರು ಕೋರಿದರು. | ಇದಕ್ಕೆ ಸಂಬಂದಿಸಿದಂತೆ ಸ್ಥಳ ಪರಿಶೀಲನೆ ಮಾಡಿ ಸ್ವಚ್ಚತೆ ಕೆಲಸ ನಿರ್ವಹಿಸಲು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ನೋಡೆಲ್ ಅಧಿಕಾರಿಗಳು ತಿಳಿಸಿದರು | ಹಿರಿಯ ಆರೋಗ್ಯ ಪರಿವೀಕ್ಷಕರು ಯಲಹಂಕ |
| 05 | ಯಲಹಂಕ ರಾಮಯ್ಯ ಕಾಂಪ್ಲೇಕ್ಸ್ ಮುಂಭಾಗ, ಶುಶ್ರೂಷ ಆಸ್ಪತ್ರೆ ಮುಂಭಾಗ, ಆರ್.ಆರ್.ಗೋಲ್ಡ್ ಪಾಲೇಸ್ ಮುಂಭಾಗ, ಮತ್ತು ಬಿ.ಬಿ.ರಸ್ತೆಗಳಲ್ಲಿ ಘನತ್ಯಾಜ್ಯ ನಿರ್ವಹಣೆ ಕೆಲಸವನ್ನು ಸಮರ್ಪಕವಾಗಿ ನಿರ್ವಹಿಸುತ್ತಿರುವುದಿಲ್ಲ ವೆಂದು ಸಭೆಯಲ್ಲಿ ಸ್ಥಳಿಯ ನಿವಾಸಿಗಳಾದ ಶ್ರೀ. ಹೇಮರಾಜ್ ರವರು ಸಭೆಯಲ್ಲಿ ಅಕ್ಷೇಪಣೆ ವ್ಯಕ್ತಪಡಿಸಿದರು. | ಇದಕ್ಕೆ ಸಂಬಂದಿಸಿದಂತೆ ಸಭೆಯಲ್ಲಿ ಹಾಜರಿದ್ದ ಶ್ರೀ. ವಿವೇಕ್ ಕುಮಾರ್ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸದರಿ ಜಾಗಗಳಲ್ಲಿ ಘನತ್ಯಾಜ್ಯ ನಿರ್ವಹಣೆ ಕೆಲಸವನ್ನು ಸಮರ್ಪಕವಾಗಿ ನಿರ್ವಹಿಸುವಂತೆ ನೋಡೆಲ್ ಅಧಿಕಾರಿಗಳು ತಿಳಿಸಿದರು | ಹಿರಿಯ ಆರೋಗ್ಯ ಪರಿವೀಕ್ಷಕರು ಯಲಹಂಕ ವಲಯ. |

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಚರ್ಚಿಸಲಾಯಿತು. ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ವಂದನೆಗಳನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

Ramasanjeevaiah

ಶ್ರೀ.ರಾಮಸಂಜೀವಯ್ಯ
ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ
ನೋಡೆಲ್ ಅಧಿಕಾರಿಗಳು ವಾರ್ಡ್ ನಂ-01

ಶ್ರೀ.ಕೆ.ಬಿ.ದೇವರಾಜಯ್ಯ
ಸಹಾಯಕ ಅಭಿಯಂತರರು

ಪ್ರತಿಯನ್ನು:
1. ಮಾನ್ಯ ಜಂಟಿ ಆಯುಕ್ತರು ಯಲಹಂಕ ವಲಯರವರ ಆಪ್ತ ಶಾಖೆಗೆ ಕಳುಹಿಸಿದೆ.
2. ಮಾನ್ಯ ಮುಖ್ಯ ಅಭಿಯಂತರರು ಯಲಹಂಕ ವಲಯರವರ ಆಪ್ತ ಶಾಖೆಗೆ ಕಳುಹಿಸಿದೆ.

3. ಆರೋಗ್ಯ ವೈದ್ಯಾಧಿಕಾರಿಗಳು ಯಲಹಂಕ ವಲಯರವರಿಗೆ ಕಳುಹಿಸಿದೆ.
4. ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ ಯಲಹಂಕ ವಿಭಾಗ/ವಿದ್ಯುತ್/ರಸ್ತೆ ಮತ್ತು ಮೂಲಭೂತ ಸೌಕಾರ್ಯ/ಯೋಜನೆ/ಕೆರೆಗಳು/ ಯಲಹಂಕ ವಲಯ ಸೂಕ್ತ ಕ್ರಮಕ್ಕಾಗಿ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ/ ವಿದ್ಯುತ್/ ಬೇಸ್ಕಾಂ/ ಬಿಡಬ್ಲ್ಯೂ.ಎಸ್.ಎಸ್.ಬಿ/ಬೋರೆವೆಲ್ ಡಿವಿಷನ್/ ಯೋಜನೆ/ಯಲಹಂಕ ವಲಯುರವರ ಸೂಕ್ತ ಕ್ರಮಕ್ಕಾಗಿ.
6. ಸಹಾಯಕ ಕಂದಾಯ ಅಧಿಕಾರಿಗಳು ಯಲಹಂಕ ಉಪ ವಿಭಾಗ/ಜಾಹಿರಾತು ಬಿ.ಬಿ.ಎಂ.ಪಿ ರವರ ಸೂಕ್ತ ಕ್ರಮಕ್ಕಾಗಿ.
7. ಆರಕ್ಷಕ ನೀರಿಕ್ಷಕರು ಯಲಹಂಕ ಪೊಲೀಸ್ ಠಾಣೆ ಸಂಚಾರಿ/ ಕಾನೂನು ಸುವ್ಯವಸ್ಥೆ/ ಯಲಹಂಕ ಬೆಂಗಳೂರು ರವರ ಸೂಕ್ತ ಕ್ರಮಕ್ಕಾಗಿ.
8. ಜಾನುವಾರಿ ಅಧಿಕಾರಿಗಳು ಪಶುಪಾಲನೆ ವಿಭಾಗ ಯಲಹಂಕ ವಲಯ ರವರ ಸೂಕ್ತ ಕ್ರಮಕ್ಕಾಗಿ.
9. ಅಧೀಕ್ಷಕರು ತೋಟಗಾರಿಕೆ ಇಲಾಖೆ ಬಿ.ಬಿ.ಎಂ.ಪಿ ಯಲಹಂಕ ವಲಯುರವರ ಸೂಕ್ತ ಕ್ರಮಕ್ಕಾಗಿ.
10. ಡಿಪೋ ಮ್ಯಾನೇಜರ್ ಡಿಪೊ-13 ಪುಟ್ಟೇನಹಳ್ಳಿ ಡಿಪೋ ಯಲಹಂಕ ಬೆಂಗಳೂರು ಸೂಕ್ತ ಕ್ರಮಕ್ಕಾಗಿ.
11. ಕಛೇರಿ ಕಡತಕ್ಕೆ.